ಸಿಸಿ ನಂ.1823/2015
ಪಿಡಬ್ಲ್ಯೂ.9

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್ಎಫ್‌ಸಿ ನ್ಯಾಯಾಲಯ, ಹುಬ್ಬಳ್ಳಿ
ಸಿ ಸಿ ನಂ.1823/2015

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | ಃ | ಮುನೀರಖಾನ್ ಪಠಾಣ | ಪಿಡಬ್ಲ್ಯೂ | ಃ | 9 |
| ತಂದೆಯ ಹೆಸರು | ಃ | ಇಸ್ಮಾಯಿಲ್ ಖಾನ್ | ಸಿಡಬ್ಲ್ಯೂ | ಃ | 16 |
| ವಯಸ್ಸು | ಃ | 55 ವರ್ಷ | | | |
| ಉದ್ಯೋಗ | ಃ | ಎಎಸ್ಐ | | | |
| ವಾಸ ಸ್ಥಳ | ಃ | ಹಳೇಹುಬ್ಬಳ್ಳಿ ಪೊಲೀಸ ಠಾಣೆ | | | |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 23/01/2020
ಮುಖ್ಯ ವಿಚಾರಣೆ ಎಪಿಪಿ ಯವರಿಂದ ಃ

ನಾನು 2010 ರಿಂದ 2016 ರವರೆಗಗೆ ಉಪನಗರ ಪೊಲೀಸ ಠಾಣೆಯಲ್ಲಿ ಮುಖ್ಯ ಪೊಲೀಸ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ20.05.2015 ರಂದು ಬೆಳಿಗ್ಗೆ ನಾನು ಠಾಣೆಯಲ್ಲಿ ವರದಿ ಮಾಡಿಕೊಂಡು ಗಸ್ತು ಕರ್ತವ್ಯಕ್ಕೆ ಹೋಗಿರುತ್ತೇನೆ. ಅದೇ ದಿನ ಚಾಸಾ 34 ರವರು ನನಗೆ ಮ.1.15 ಕ್ಕೆ ಫೋನ್ ಮಾಡಿ ಹುಬ್ಬಳ್ಳಿಯ ಐಬಿ ರೋಡ್ ಹತ್ತಿರ ಬರಲು ಹೇಳಿದರು. ಆಗ ನಾನು ಮತ್ತು ಚಾಸಾ22 ರವರು ಕೂಡಿಕೊಂಡು ಐಬಿ ರೋಡಿಗೆ ಹೋದೇವು. ಅಲ್ಲಿ ಹೋದಾಗ ಚಾಸಾ 34 ಹಾಗೂ ನಮ್ಮ ಠಾಣೆಯ ಸಿಬ್ಬಂದಿಗಳಾದ ಚಾಸಾ 15, ಚಾಸಾ 18 ರಿಂದ 21 ಹಾಜರಿದ್ದರು. ಅಲ್ಲಿ ಗುಜಾರತ ರಾಜ್ಯದ ನೊಂದಣಿ ಸಂಖ್ಯೆ ಇರುವ ಟವೇರಾ ಗಾಡಿಯಲ್ಲಿ ಒಬ್ಬ ಕುಳಿತುಕೊಂಡಿದ್ದನು. ಆಗ ಚಾಸಾ 34 ರವರು ಆ ವ್ಯಕ್ತಿಯನ್ನು ನನಗೆ ತೋರಿಸಿ , ಆತನು ಈ ಹಿಂದೆ ನಮ್ಮ ಠಾಣೆಯ ಗುನ್ನೆ ನಂ.8/2015 ರಲ್ಲಿಯ ಆರೋಪಿ ಇದ್ದ ಹಾಗೆ ಕಾಣುತ್ತಾನೆ ಅಂತಾ ಹೇಳಿದರು, ನಾವು ಆ ಗುನ್ನೆ ನಂ.8/2015 ರ ಆರೋಪಿಯ ಚೆಹರೆ ಪಟ್ಟಿಯನ್ನು ಕಾಟನ್ ಮಾರ್ಕೆಟಿನಲ್ಲಿರುವ ಆ್ಯಕ್ಸಿಸ್ ಬ್ಯಾಂಕಿನ ಸಿಸಿಟಿವಿ ಕ್ಯಾಮರಾ ದೃಶ್ಯಾವಳಿಯಲ್ಲಿ ನಾವೆಲ್ಲರೂ ನೋಡಿರುತ್ತೇವೆ. ಅದೇ ಗಾಡಿಯಲ್ಲಿ ಇನ್ನೂ 8-10 ಜನರು ಇದ್ದರು ಅವರುಗಳು ನಮ್ಮನ್ನು ನೋಡಿದ ತಕ್ಷಣ ಗಾಡಿಯನ್ನು ಸ್ಟಾರ್ಟ ಮಾಡಿದರು. ಗಾಡಿಯನ್ನು ಸ್ಟಾರ್ಟ ಮಾಡಿ ದೇಸಾಯಿ ಸರ್ಕಲ್ ಹತ್ತಿರ ಹೋದರು ಆಗ ಚಾಸಾ 34 ರವರು ನಮಗೆ ಅವರ ಗಾಡಿಯನ್ನು ಹಿಂಬಾಯಿಸಲು ಹೇಳಿದರು. ಆಗ ನಾವು ನಮ್ಮ ನಮ್ಮ ಮೋಟಾರ ಸೈಕಲ್ಲುಗಳ ಮೇಲೆ ಹಾಗೂ ಚಾಸಾ 34

ರವರು ಅವರ ಜೀಪಿನಲ್ಲಿ ಆ ಗಾಡಿಯನ್ನು ಹಿಂಭಾಲಿಸಿದೇವು. ನಂತರ ಗದಗ ರೇಲ್ವೆ ಗೇಟ್ ಬಳಿ ಚಾಸಾ 34 ರವರು ಅವರು ತಮ್ಮ ಜೀಪನ್ನು ಮೇಲೆ ಹೇಳಿದ ಗಾಡಿಗೆ ಅಡ್ಡ ಹಾಕಿ ನಿಲ್ಲಿಸಿ, ಆ ಗಾಡಿಯಲ್ಲಿರುವ ಆರೋಪಿಗಳಿಗೆ ಓಡ ಓಡ ಬೇಡಿ ಅಂತಾ ಹೇಳಿದರು, ಅಷ್ಟರಲ್ಲಿ ಇಬ್ಬರು ಆರೋಪಿಗಳು ಓಡಿ ಹೋದರು. ಆಗ ನಮ್ಮ ಸಿಬ್ಬಂದಿಗಳು ಒಬ್ಬಬ್ಬೊ ಆರೋಪಿ ಅಂತಾ ಒಟ್ಟು 8 ಜನ ಆರೋಪಿತರನ್ನು ಹಿಡಿದೇವು. ನಾನು ರವಿಬಾಯ್ ಎಂಬ ಆರೋಪಿತನನ್ನು ಹಿಡಿದುಕೊಂಡೇನು. ಅವರನ್ನು ನೋಡಿದರೆ ಗುರುತಿಸುತ್ತೇನೆ. (ಎಲ್ಲ ಆರೋಪಿತರು ಗೈರು ಹಾಜರ ಇದ್ದು ಅವರ ಪರವಾಗಿ ಅವರ ವಕೀಲರು ವಿನಾಯತಿ ಅರ್ಜಿಯನ್ನು ಹಾಕಿದ್ದು ಆ ವಿನಾಯತಿ ಅರ್ಜಿಯಲ್ಲಿ ಸಾಕ್ಷಿಯು ಸದರಿ ಆರೋಪಿತರನ್ನು ಗುರುತಿಸುವಲ್ಲಿ ಯಾವುದೇ ಆಕ್ಷೇಪಣೆ ಇಲ್ಲ ಅಂತಾ ಹಿಂಬರಹ ಬರೆದಿರುತ್ತಾರೆ). ಅವರ ಹೆಸರುಗಳನ್ನು ಕೇಳಲಾಗಿ ಅವರೆಲ್ಲರೂ ಗುಜರಾತ ಮೂಲದವರು ಅಂತಾ ಹೇಳಿದರು. ಅವರ ಮೇಲೆ ಸಂಶಯಬಂದು ಅವರನ್ನು ಠಾಣೆಗೆ ಕರೆದುಕೊಂಡು ಬಂದೇವು. ಠಾಣೆಯಲ್ಲಿ ಚಾಸಾ 34 ರವರು ಅವರೆಲ್ಲರನ್ನೂ ವಿಚಾರಿಸಲಾಗಿ ಆ ಎಲ್ಲ ವ್ಯಕ್ತಿಗಳು ಹುಬ್ಬಳ್ಳಿಯಲ್ಲಿ ಈ ಹಿಂದೆ ಆದ ಬ್ಯಾಂಕ ರಾಬರಿ ಪ್ರಕರಣಗಳಲ್ಲಿ ಶಾಮೀಲಾದ ವ್ಯಕ್ತಿಗಳು ಅಂತಾ ಕಂಡು ಬಂದಿತು. ಅವರುಗಳನ್ನು ಮತ್ತೇ ವಿಚಾರಿಸಲಾಗಿ 20 ದಿನಗಳ ಹಿಂದೆ ಧಾರವಾಡದ ಎಸ.ಬಿ.ಐ ಬ್ಯಾಂಕಿನಲ್ಲಿ ಒಬ್ಬ ವ್ಯಕ್ತಿ ಬ್ಯಾಂಕಿನಿಂದ ಹಣವನ್ನು ತೆಗೆದುಕೊಂಡು ಬರುತ್ತಿರುವಾಗ ಅವನನ್ನು ಸ್ವಲ್ಪ ದೂರದವರೆಗೆ ಹಿಂಭಾಲಿಸಿ ಸಾಯಿಬಾಬಾ ಮಂದಿರದ ಬಳಿ ಆತನನ್ನು ಹಣವನ್ನು ದೋಚಿದೇವು ಅಂತಾ ಹೇಳಿದರು. ಮತ್ತೇ ವಿಚಾರಣೆಯನ್ನು ಮಾಡಿದಾಗ ದಿ.30/04/2014 ರಂದು ಬೆಳಗಾವಿಯಲ್ಲಿ ಕಳ್ಳತನ ಮಾಡಿರುತ್ತೇವೆ ಅಂತಾ ಹೇಳಿದರು. ಮತ್ತೇ ವಿಚಾರಣೆ ಮುಂದುವರೆಸಿದಾಗ ಅವರು ಸ್ವಲ್ಪ ದಿನಗಳ ಮತ್ತೇ ಹುಬ್ಬಳ್ಳಿಗೆ ಬಂದು ಹೆಚ್.ಡಿ.ಎಫ್.ಸಿ ಬ್ಯಾಂಕಿನ ಬಳಿ ಮೋಟರ ಸೈಕಲ್ ಮೂಲಕ ಹೋಗಿ ವಾಚ್ ಮಾಡಿರುತ್ತೇವೆ ಅಂತಾ ಹೇಳಿದರು. ಆಗ 1 ನೇ ಆರೋಪಿ ಬ್ಯಾಂಕಿನ ಒಳಗಡೆ ಹೋದಾ ಯಾರು ಹಣವನ್ನು ತೆಗೆಯುತ್ತಾರೆ ಅಂತಾ ವೀಕ್ಷಿಸಿದನು ಅಲ್ಲಿ ಒಬ್ಬ ವಯಸ್ಸಾದ ಮುದುಕ ಹಣವನ್ನು ಪಡೆಯುವುದನ್ನು ನೋಡಿದನು , ವಯಸ್ಸಾದ ಮುದಕನೊಂದಿಗೆ 1 ನೇ ಆರೋಪಿ ಹೊರಗೆ ಬಂದು ತಮ್ಮ ಉಳಿದ ಸದಸ್ಯರಿಗೆ ಸನ್ನೆಯನ್ನು ಮಾಡಿ ಹೇಳಿದ , ಅದರಲ್ಲಿಯ ಸುಧೀರ ಮತ್ತು ದಿವಾಕರ. ಸುಧೀರ ಇತನು ತಲೆಗೆ ಹೆಲ್ಮೆಟ್

ಹಾಕಿಕೊಂಡಿದ್ದ ಹಾಗೂ ದಿವಾಕರ ಇತನು ಬೈಕಿನ ಹಿಂದುಗಡೆ ಕುಳಿತುಕೂಂಡಿದ್ದನು. ಮೇಲೆ ಹೇಳಿದ ವಯಸ್ಸಾದ ಮುದುಕ ಆತನಿಗೆ ಸೇರಿದ ಮೋಟಾರ ಸೈಕಲ್‌ನ್ನು ಇನ್ನೊಬ್ಬ ಚಲಾಯಿಸುತ್ತಿದ್ದಾಗ ವಯಸ್ಸಾದ ಮುದುಕ ಹಿಂದುಗಡೆ ಕುಳಿತುಕೊಳ್ಳುವಾಗ ಸುಧೀರ ಮತ್ತು ದಿವಾಕರ ಇವರುಗಳು ವಯಸ್ಸಾದ ಮುದಕನ ಕೈಯಿಂದ ಬ್ಯಾಗನ್ನು ಕಸಿದುಕೊಂಡು ಮೋಟಾರ ಸೈಕಲ್ಲಿನಲ್ಲಿ ಓಡಿ ಹೋಗಿರುತ್ತೇವೆ ಅಂತಾ ಹೇಳಿದರು. ಅಲ್ಲಿಂದ ಬೈಪಾಸ್ ಕಡೆ ಬಂದು ಬ್ಯಾಗನ್ನು ಚೆಕ್ಕ ಮಾಡಲಾಗಿ 2 ಲಕ್ಷ 60 ಸಾವಿರ ರೂಪಾಯಿ ಹಣ ಇತ್ತು ಅಂತಾ ಹೇಳಿದರು. ಅಲ್ಲದೇ ಇದೇ ಆರೋಪಿಗಳು ಹುಬ್ಬಳ್ಳಿಯ ದೇಸಾಯಿ ಸರ್ಕಲ್ , ಗದಗ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಇದೇ ರೀತಿಯ ಕೃತ್ಯಗಳನ್ನು ಮಾಡಿರುತ್ತಾರೆ ಅಂತಾ ಹೇಳಿರುತ್ತಾರೆ, ಬಹಳ ದಿನಗಳು ಆಗಿರುವುದರಿಂದ ನನಗೆ ಈ ಕೃತ್ಯಗಳ ಬಗ್ಗೆ ನೆನಪಿಲ್ಲ.

ನಂತರ ಚಾಸಾ 34 ರವರು ಎಲ್ಲ ಆರೋಪಿತರನ್ನು ಅರೆಸ್ಟ ಮಾಡಿ ಅವರುಗಳಿಂದ ಒಂದು ಟವೇರಾ ಗಾಡಿ ಹಾಗೂ ನಾಲ್ಕು ಮೋಟಾರ ಸೈಕಲ್ಲುಗಳನ್ನು ಜಪ್ತಿ ಮಾಡಿ ವಶಪಡಿಸಿಕೊಂಡಿರುತ್ತಾರೆ. ಆರೋಪಿತರೊಂದಿಗೆ ಗುಜಾರಾತ ರಾಜ್ಯದಲ್ಲಿರುವ ಒಂದು ಪ್ರದೇಶಕ್ಕೆ ಅಲ್ಲಿ ನಗದು ಹಣವನ್ನು ಕೂಡಾ ವಶಪಡಿಸಿಕೊಂಡಿರುತ್ತಾರೆ. ಅಲ್ಲಿ ಇಂತಹ ವ್ಯಕ್ತಿಗಳ ಒಂದು ಕಾಲೋನಿಯೇ ಇದೇ, ಅದರ ಹೆಸರು ನೆನಪಿಲ್ಲ.

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಾಡಲು ಮಾನ್ಯ ಸಸಅ ರವರು ಸಮಯ ಕೇಳಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಫ್ , ಹುಬ್ಬಳ್ಳಿ.